# ವಡ್ಡಾರಾಧನೆ–ವ್ಯವಹಾರ ನಿರ್ವಹಣೆ

**ಪುನೀತ್‌ಕುಮಾರ್ ಕೆ.ಆರ್.**

ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಕಳಸ, ಚಿಕ್ಕಮಗಳೂರು.

**DOI: https://doi.org/10.5281/zenodo.18116494**

## ABSTRACT:

ಪ್ರಸ್ತುತ ಲೇಖನವು 10ನೇ ಶತಮಾನದ ಶಿವಕೋಟ್ಯಾಚಾರ್ಯ ವಿರಚಿತ ‘ವಡ್ಡಾರಾಧನೆ’ಯ ‘ಭದ್ರಬಾಹು ಭಟಾರರ ಕಥೆ’ಯ ಉಪಕಥೆಯೊಂದನ್ನು ಆಧುನಿಕ ವ್ಯವಹಾರ ನಿರ್ವಹಣೆಯ (Business Management) ದೃಷ್ಟಿಕೋನದಿಂದ ವಿಶ್ಲೇಷಿಸುತ್ತದೆ. ನಂದಿಮಿತ್ರ, ಕಾಷ್ಠಕೂಟ ಮತ್ತು ಜಯಘಂಟೆ ಎಂಬ ಪಾತ್ರಗಳ ಮೂಲಕ ಅಂದಿನ ಕಾಲದ ಶ್ರಮಿಕ ವರ್ಗದ ಶೋಷಣೆ, ಬಂಡವಾಳಶಾಹಿ ಮನೋಭಾವ ಮತ್ತು ಮಾರುಕಟ್ಟೆಯ ಏಕಸ್ವಾಮ್ಯದ ಒಳನೋಟಗಳನ್ನು ಲೇಖಕರು ಪರಿಚಯಿಸಿದ್ದಾರೆ. ಮಾನವನ ಮೂಲಭೂತ ಅವಶ್ಯಕತೆಗಳಾದ ಆಹಾರ ಮತ್ತು ಬಟ್ಟೆಯ ಪೂರೈಕೆಯು ಹೇಗೆ ಉದ್ಯಮಿಯ ಕಾರ್ಯತಂತ್ರಕ್ಕೆ ಒಳಪಟ್ಟಿರುತ್ತದೆ ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ. ಹಳೆಯ ಸಾಹಿತ್ಯವು ಕೇವಲ ಧಾರ್ಮಿಕ ಸಂದೇಶಕ್ಕೆ ಸೀಮಿತವಾಗದೆ, ಸಮಕಾಲೀನ ಜಾಗತಿಕ ಮಾರುಕಟ್ಟೆಯ ಕೌಶಲ್ಯ ಮತ್ತು ಸವಾಲುಗಳನ್ನು ಅರ್ಥೈಸಿಕೊಳ್ಳಲು ಹೇಗೆ ಪ್ರಸ್ತುತವಾಗಿದೆ ಎಂಬುದನ್ನು ಲೇಖನವು ಮನವರಿಕೆ ಮಾಡಿಕೊಡುತ್ತದೆ.

## KEYWORDS:

ವಡ್ಡಾರಾಧನೆ, ವ್ಯವಹಾರ ನಿರ್ವಹಣೆ, ನಂದಿಮಿತ್ರ, ಮಾರುಕಟ್ಟೆ ಕೌಶಲ್ಯ, ಶ್ರಮಿಕ ಶೋಷಣೆ.

ನಿರ್ದಿಷ್ಟ ಆಶಯವನ್ನಿಟ್ಟುಕೊಂಡು ಘಟನೆಗಳ ಮೂಲಕ ಚಿಕ್ಕದಾಗಿ ಹಾಗೂ ಚೊಕ್ಕವಾಗಿ ಹೆಣೆಯುವ ಕಲಾ ಪ್ರಕಾರವೇ ಕಥೆ. ಕಥಾ ಸಾಹಿತ್ಯವು ಆಯಾ ಪ್ರದೇಶ, ಕಾಲ ಮತ್ತು ಪರಿಸರಕ್ಕೆ ಅನುಗುಣವಾಗಿ ಹುಟ್ಟಿಕೊಂಡ ಪ್ರಕಾರ. ಇದರ ಹರವು ಚಿಕ್ಕದಾಗಿದ್ದು, ಬಹಳಷ್ಟು ಬಾರಿ ಅದು ನೀಡುವ ಸಂದೇಶ ಸಾರ್ವಕಾಲಿಕವಾಗಿರುತ್ತದೆ. ಕಥೆಗಾರರು ತಮ್ಮ ಕಾಲದ ಜ್ಞಾನ, ನೀತಿ, ಮನೋರಂಜನೆ ಹಾಗೂ ಸಂಸ್ಕೃತಿಯನ್ನು ಕಥೆಗಳ ಮೂಲಕ ಮುಂದಿನ ಪೀಳಿಗೆಗೆ ದಾಟಿಸುತ್ತಾರೆ. ಅಲ್ಲದೇ ಕಥೆಗಳ ಚೌಕಟ್ಟು ಚಿಕ್ಕದಾಗಿದ್ದು, ಮನಸ್ಸಿಗೆ ಮುದ ನೀಡುವುದರಿಂದ ಇವುಗಳನ್ನು ಬಹುತೇಕರು ಆಸಕ್ತಿಯಿಂದ ಕೇಳುತ್ತಾರೆ. ಹಾಗಾಗಿ ಕಥೆಗಳಿಗೆ ಸಹೃದಯರು ಹೆಚ್ಚು ಎಂದು ಹೇಳಬಹುದು. ಕಥಾ ಸಾಹಿತ್ಯವನ್ನು ಜಾನಪದ, ನೀತಿ, ಪೌರಾಣಿಕ, ದಂತಕಥೆಗಳೆಂದು ವಿವಿಧ ವಿಭಾಗಗಳಾಗಿ ವಿಂಗಡಿಕೊಳ್ಳಬಹುದು.

ಕನ್ನಡ ಕಥಾ ಸಾಹಿತ್ಯದ ದಾಖಲೆ ಮೊದಲು ದೊರಕುವುದು ಕ್ರಿ.ಶ. ಸುಮಾರು ಹತ್ತನೇ ಶತಮಾನದ ಶಿವಕೋಟ್ಯಾಚಾರ್ಯ ವಿರಚಿತ ‘ವಡ್ಡಾರಾಧನೆ’ ಕೃತಿಯಿಂದ.

ಮುಂದೆ ದುರ್ಗಸಿಂಹನ 'ಕರ್ಣಾಟಕ ಪಂಚತಂತ್ರಂ', ನಯಸೇನನ 'ಧರ್ಮಾಮೃತಂ' ಅಂತಹ ಕೃತಿಗಳನ್ನು ಉದಾಹರಿಸಬಹುದು. ಕೃತಿಕಾರರು ಪ್ರಾಕೃತ-ಸಂಸ್ಕೃತ ಸಾಹಿತ್ಯದ ಸಾರವನ್ನು ಕನ್ನಡದ ಜಾಯಮಾನಕ್ಕೆ ಹೊಂದುವಂತೆ ಮಾರ್ಪಡಿಸಿ, ಕನ್ನಡದ ಮನಸ್ಸುಗಳಿಗೆ ಹಂಚಿರುವುದನ್ನು ಕಾಣುತ್ತೇವೆ. ಕಥಾ ಪ್ರಕಾರವನ್ನು ಕಥೆಗಾರರು ತಮ್ಮ ಧರ್ಮದ ಸಿದ್ಧಾಂತ, ಆಶಯ, ಉದ್ದೇಶಗಳನ್ನು ವ್ಯಕ್ತಪಡಿಸಲು ಬಳಸಿರುವಂತೆಯೇ ಜನರನ್ನು ಸುಶಿಕ್ಷಿತರನ್ನಾಗಿಸಿ ಜಾಣರನ್ನಾಗಿಸಲೂ ಬಳಸಿದ್ದಾರೆ. ಕಥೆಯ ಉದ್ದೇಶ ಕೇವಲ ಮನೋರಂಜನೆಯೊಂದೆ ಅಲ್ಲದೇ ಸಮಕಾಲೀನ ಸಮಾಜದ ಚಿತ್ರಣವನ್ನು ನೀಡುತ್ತಾ, ಆ ಸಮಾಜದಲ್ಲಿ ಬದುಕಲು ಅಗತ್ಯವಾಗಿರುವ ಕೌಶಲ್ಯಗಳನ್ನು ರೂಢಿಸಿಕೊಳ್ಳಲು ಅನುವು ಮಾಡಿಕೊಡುವುದೂ ಆಗಿದೆ. ಹಾಗೆಯೇ ಹಲವು ಕಥೆಗಳು ಆಯಾ ಕಾಲಘಟ್ಟಕ್ಕೆ ಮಾತ್ರ ಸೀಮಿತವಾಗಿರುವುದನ್ನೂ ಕಾಣಬಹುದು.

ಈ ನೆಲೆಯಲ್ಲಿ ಚಿಂತಿಸಿ ಪ್ರಸ್ತುತ ಲೇಖನದಲ್ಲಿ ಶಿವಕೋಟ್ಯಾಚಾರ್ಯನ 'ವಡ್ಡಾರಾಧನೆ'ಯಲ್ಲಿ ಮೂಡಿಬಂದಿರುವ ಆ ಕಾಲದ ಜನಜೀವನ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಿಸರದ ಒಳನೋಟಗಳ ಬಗ್ಗೆ ಬೆಳಕು ಚೆಲ್ಲಲಾಗಿದೆ. ಆತ ಜೀವನೋಪಾಯಕ್ಕೆ ಅಗತ್ಯವಾದ ಕೌಶಲ್ಯ, ವ್ಯಾವಹಾರಿಕ ಚಾತುರ್ಯ, ಕೂಟನೀತಿ, ರಾಜತಾಂತ್ರಿಕತೆ ಮುಂತಾದ ಕಲೆಗಳನ್ನು ಅಳವಡಿಸಿಕೊಳ್ಳುವ ಅಗತ್ಯವನ್ನು ಹಲವು ಕಥೆ-ಉಪಕಥೆಗಳ ಮೂಲಕ ಮನಗಾಣಿಸಿದ್ದಾನೆ. ಈ ಲೇಖನದಲ್ಲಿ ಶಿವಕೋಟ್ಯಾಚಾರ್ಯನ ವಡ್ಡಾರಾಧನೆಯ 'ಭದ್ರಬಾಹುಭಟಾರರ ಕಥೆ' ಎಂಬ ನೀಳ್ಗತೆಯಲ್ಲಿರುವ ಒಂದು ಉಪಕಥೆಯನ್ನು ಆಧರಿಸಿ, ಮಾನವನ ಮೂಲಭೂತ ಅಗತ್ಯಗಳು; ಅದಕ್ಕಾಗಿ ಮಾಡುವ ವೃತ್ತಿ; ಬಯಸುವ ಸೌಲಭ್ಯಗಳು, ಬಂಡವಾಳಶಾಹಿಯ ಹಿಡಿತ, ಸಹಾನುಭೂತಿ ಉಳ್ಳವರು ಅನುಭವಿಸುವ ಯಾತನೆ, ನೊಂದ ಕಾರ್ಮಿಕರ ಶಾಪ-ನಿಟ್ಟುಸಿರು, ಶ್ರೀಸಾಮಾನ್ಯನ ಅರಿವಿಗೆ ಬಾರದ ಮಾರುಕಟ್ಟೆಯ ಅಲಿಖಿತ ಅಘೋಷಿತ ಕಟ್ಟಳೆಗಳು, ಕಾರ್ಮಿಕ ಕಾರ್ಮಿಕನಾಗಿ, ಬಡವ ಬಡವನಾಗಿಯೇ ಉಳಿಯಬೇಕಾದ ಅಸಹಾಯಕ ಪರಿಸ್ಥಿತಿ, ಮಾರುಕಟ್ಟೆ ಪ್ರವೇಶಿಸುವ ಮುನ್ನ ಅರಿಯಬೇಕಾದ, ಗಳಿಸಿಕೊಳ್ಳಬೇಕಾದ ವ್ಯವಹಾರ ನಿರ್ವಹಣಾ ಕೌಶಲ್ಯಗಳು – ಹೀಗೆ ಇಡೀ ಮಾನವನ ಜೀವನ ಜಾಗತಿಕ ಮಾರುಕಟ್ಟೆಯೊಂದಿಗೆ ಹೇಗೆ ತಳುಕು ಹಾಕಿಕೊಂಡಿದೆ ಎಂಬುದನ್ನು ಇಲ್ಲಿ ಕಥೆಯಲ್ಲಿಯ ಘಟನೆಗಳ ಮೂಲಕ ಪ್ರಸ್ತುತಕ್ಕೂ ಅನ್ವಯಿಸುವ ರೀತಿಯಲ್ಲಿ ವಿಶ್ಲೇಷಿಸಲಾಗಿದೆ. ಈ ಕಥೆಯ ಸಾರ ಹೀಗಿದೆ:

"ಜಂಬೂದ್ವೀಪದ ಭರತಕ್ಷೇತ್ರದಲ್ಲಿ ಆವಂತಿ ಎಂಬ ನಾಡಿದೆ. ಆ ನಾಡಿನಲ್ಲಿ ವೈದಿಶವೆಂಬ ಪಟ್ಟಣವಿದ್ದು, ಆ ಪಟ್ಟಣವನ್ನು ಜಯವರ್ಮನೆಂಬ ರಾಜ ಆಳುತ್ತಿದ್ದನು. ಆ ಪಟ್ಟಣದ ಸಮೀಪದಲ್ಲಿರುವ ಪರಾಳಕೂಟವೆಂಬ ಊರಿನಲ್ಲಿ ಸರಕು ಸಾಗಿಸುವ ಗಾಡಿಗಳನ್ನು ಹೊಂದಿರುವ ದೇವಿಲ ಎಂಬ ವರ್ತಕನಿದ್ದನು. ಆತನ ಹೆಂಡತಿ ಪೃಥ್ವಿಶ್ರೀ. ಅವಳ ಬಸಿರಿನಲ್ಲಿ ಪಾಪಕೃತ್ಯವನ್ನು ಮಾಡಿದ ಒಂದು ಜೀವವು ನೆಲೆಸುತ್ತದೆ. ಇದರ ಪರಿಣಾಮವಾಗಿ ದೇವಿಲನ ಸಂಪತ್ತು ನಶಿಸಲು ಆರಂಭವಾಗಿ, ಕಷ್ಟಕರವಾದ ದಿನಗಳನ್ನು ಎದುರಿಸುವಂತಾಗುತ್ತದೆ. ಒಂದು ದಿನ ದೇವಿಲನು

ಗಾಡಿಯುಳ್ಳ ಹಲವು ಮಂದಿ ವ್ಯಾಪಾರಿಗಳನ್ನು ಕೂಡಿಕೊಂಡು, ಗಾಡಿಗಳಲ್ಲಿ ಹತ್ತಿ ಹಾಗೂ ಧಾನ್ಯಗಳನ್ನು ತುಂಬಿಸಿಕೊಂಡು ಪಟ್ಟಣಕ್ಕೆ ಮಾರಲೆಂದು ಕಾಡಿನ ಹಾದಿಯಲ್ಲಿ ಪ್ರಯಾಣಿಸುತ್ತಿರುತ್ತಾನೆ. ಆಗ ಕಾಡಿನಲ್ಲಿ ಅಡಗಿದ್ದ ಕಳ್ಳರು ಪದಾರ್ಥಗಳನ್ನು ದೋಚುವ ಸಲುವಾಗಿ ಇವರ ಮೇಲೆ ಆಕ್ರಮಣ ಮಾಡುತ್ತಾರೆ. ಕಳ್ಳರಿಂದ ಬಲವಾದ ಪೆಟ್ಟು ಬಿದ್ದಿದ್ದರಿಂದ ಹಲವು ವರ್ತಕರೊಂದಿಗೆ ದೇವಿಲನೂ ಸತ್ತುಹೋಗುತ್ತಾನೆ. ಅದೇ ಸಮಯದಲ್ಲಿ ಇತ್ತ ದೇವಿಲನ ಹೆಂಡತಿ ಗಂಡುಮಗುವಿಗೆ ಜನ್ಮ ನೀಡುತ್ತಾಳೆ. ಆ ಮಗುವಿಗೆ ನಂದಿಮಿತ್ರನೆಂದು ನಾಮಕರಣ ಮಾಡಿ, ಎರಡು-ಮೂರು ತಿಂಗಳಲ್ಲಿ ಪೃಥ್ವಿಶ್ರೀಯೂ ಸಾವನ್ನಪ್ಪುತ್ತಾಳೆ. ಅನಾಥನಾದ ನಂದಿಮಿತ್ರನನ್ನು ನೆಂಟರು ಸಾಕಲು ಕರೆದೊಯ್ಯುತ್ತಾರೆ. ಆದರೆ ನಂದಿಮಿತ್ರನನ್ನು ಯಾರು ಸಾಕುತ್ತಾರೊ ಅವರೆಲ್ಲರೂ ಸತ್ತುಹೋಗುತ್ತಾರೆ. ಹೀಗೆ ಆತ ಯಾವ ಬಂಧುಗಳ ಮನೆಹೊಕ್ಕು ಆಶ್ರಯ ಪಡೆದರೂ ಅವರೆಲ್ಲರೂ ಸಾವಿಗೀಡಾಗಿದ್ದರಿಂದ ಆತನ ಕುಲವೇ ನಾಶವಾಗುತ್ತದೆ. ಆಗ ಊರಿನವರೆಲ್ಲರೂ ಒಂದಾಗಿ, ಈ ನಂದಿಮಿತ್ರ ನಮ್ಮ ಊರಿನಲ್ಲಿದ್ದರೆ ನಮಗೂ-ಊರಿಗೂ ಕೇಡಾಗುವುದೆಂದು ತೀರ್ಮಾನಿಸಿ, ಆತನನ್ನು ಊರಿನಿಂದ ಓಡಿಸುತ್ತಾರೆ.

ಹೀಗೆ ಊರಿನಿಂದ ಓಡಿಸಲ್ಪಟ್ಟ ನಂದಿಮಿತ್ರನು ಸಮೀಪದ ಊರುಗಳನ್ನೂ ನಾಡುಗಳನ್ನೂ ಸುತ್ತುತ್ತಾ ಭಿಕ್ಷೆ ಬೇಡಿಕೊಂಡು ಜೀವನ ಸಾಗಿಸುತ್ತಿರುತ್ತಾನೆ. ಆತ ಹದಿನೈದು-ಹದಿನಾರು ವರ್ಷದ ಪ್ರಾಯದಲ್ಲಿ ವೈದಿಶವೆಂಬ ಪಟ್ಟಣಕ್ಕೆ ಬರುತ್ತಿರುವಾಗ, ಕಾಡಿನಲ್ಲಿ ಸೌದೆಕಡಿದು ಪಟ್ಟಣದಲ್ಲಿ ಮಾರುವ ಕಾಷ್ಠಕೂಟ ಎಂಬ ಹೆಸರಿನ ಕಾರ್ಮಿಕನೂ ಸೌದೆ ಹೊರೆ ಹೊತ್ತುಕೊಂಡು ಪಟ್ಟಣಕ್ಕೆ ಬರುತ್ತಿದ್ದನು. ನಂದಿಮಿತ್ರ ಸಕಾರಣವಿಲ್ಲದೆ ಆ ಕಾಷ್ಠಕೂಟನನ್ನು ಹಿಂಬಾಲಿಸುತ್ತಾನೆ. ಸೌದೆಯ ಹೊರೆ ಭಾರವಾಗಿದ್ದರಿಂದ ಆ ಕಾರ್ಮಿಕ ಪಟ್ಟಣದ ಹೊರಗಿನ ಉದ್ಯಾನವನದಲ್ಲಿ ತಲೆಮೇಲಿನ ಹೊರೆಯನ್ನು ಕೆಳಗಿಳಿಸಿ, ವಿಶ್ರಾಂತಿಗಾಗಿ ಮಲಗಿದನು. ಆತ ಮಲಗಿದ್ದರಿಂದ ತಾನೂ ಅದೇ ರೀತಿ ಮಲಗಬೇಕೇನೋ ಎಂದು ಆಲೋಚಿಸಿ, ತಲೆಗೆ ದಿಂಬಾಗಿ ಏನಾದರೂ ಸಿಗುವುದೇ ಎಂದು ಸುತ್ತಲೂ ನೋಡಿದಾಗ ಏನೂ ಕಾಣದೆ, ಎಂಟು ಜನರಿಂದ ಅಲುಗಾಡಿಸಲೂ ಸಾಧ್ಯವಾಗದ ದೂರದಲ್ಲಿದ್ದ ಕಲ್ಲೊಂದನ್ನು ಅನಾಯಾಸವಾಗಿ ಎತ್ತಿತಂದು, ತಲೆದಿಂಬಾಗಿ ಇಟ್ಟು ಮಲಗುತ್ತಾನೆ. ನಂದಿಮಿತ್ರನ ಬಲವನ್ನು ಕಂಡ ಕಾಷ್ಠಕೂಟನಿಗೆ ಆಶ್ಚರ್ಯವಾಗುತ್ತದೆ. ಆತನನ್ನು ತನ್ನ ಮನೆಗೆ ಕರೆದುಕೊಂಡು ಹೋದ ಕಾಷ್ಠಕೂಟ, 'ಈ ಪಟ್ಟಣದಲ್ಲಿ ನಿನಗೆ ಯಾರಾದರೂ ನೆಂಟರಿರುವರೆ?' ಎಂದು ಪ್ರಶ್ನಿಸಿ, ಯಾರೂ ಇಲ್ಲ ಎಂಬುದನ್ನು ಖಚಿತಪಡಿಸಿಕೊಂಡ ಬಳಿಕ ನಂದಿಮಿತ್ರನನ್ನು ಆತನ ಬಳಿ ಕೆಲಸಕ್ಕೆ ಸೇರಿಸಿಕೊಳ್ಳುತ್ತಾನೆ. ಅಲ್ಲದೇ ತನ್ನ ಹೆಂಡತಿಯಾದ ಜಯಘಂಟೆ ಬಳಿಹೋಗಿ, 'ಈತನಿಗೆ (ನಂದಿಮಿತ್ರ) ನೀನು ಹೊಟ್ಟೆ ತುಂಬುವಷ್ಟು ಊಟ ಬಡಿಸಬೇಡ, ತಲೆಗೆ ಎಣ್ಣೆಯನ್ನು ಹೆಚ್ಚು ಹಾಕಬೇಡ, ಸ್ನಾನಕ್ಕಾಗಿ ಕೇಳಿದರೂ ಕೂಡ ಮೈಗೆ ಎಣ್ಣೆ ಕೊಡಬೇಡ' ಎಂದು ಆಜ್ಞಾಪಿಸುತ್ತಾನೆ. ಮಾರನೆಯ ದಿನದಿಂದ ಕಾಷ್ಠಕೂಟ-ನಂದಿಮಿತ್ರ ಇಬ್ಬರೂ ಕಾಡಿಗೆ ಹೋಗಿ, ಸೌದೆ ಕಡಿದು, ಪಟ್ಟಣಕ್ಕೆ ತಂದು ಮಾರುತ್ತಿದ್ದರು. ಕಾಷ್ಠಕೂಟ ನಂದಿಮಿತ್ರನ ಬಲವನ್ನು

ಕಂಡಿದ್ದರಿಂದ ಆತನಿಗೆ ಹತ್ತುಜನ ಹೊರುವಂತಹ ಬಲವಾದ ಸೌದೆಹೊರೆಯನ್ನು ಹೊರಿಸುತ್ತಿದ್ದನು. ಇದರಿಂದಾಗಿ ಅವನು ಬಹಳ ಬೇಗ ಧನಿಕನಾದನು. ಜಯಘಂಟೆ ಗಂಡನ ಆಜ್ಞಾನುಸಾರ ನಂದಿಮಿತ್ರನಿಗೆ ಅರೆಹೊಟ್ಟೆಯ ಊಟ ಬಡಿಸುತ್ತಿದ್ದಳು. ಹೀಗಿರಲು ಒಂದು ಹಬ್ಬದ ದಿನದಂದು ಆಕೆ ನಂದಿಮಿತ್ರನ ಮೇಲೆ ಕನಿಕರಪಟ್ಟು, ತೃಪ್ತಿಯಾಗುವಷ್ಟು ಹೊಟ್ಟೆತುಂಬ ಊಟ ನೀಡುತ್ತಾಳೆ.

ಮಾರನೆಯ ದಿನ ನಂದಿಮಿತ್ರ–ಕಾಷ್ಠಕೂಟರಿಬ್ಬರೂ ಸೌದೆ ತರಲು ಕಾಡಿಗೆ ಹೋದಾಗ, ನಂದಿಮಿತ್ರನು 'ಅಯ್ಯಾ, ನನಗೆ ಉಡಲು ಬಟ್ಟೆಯಿಲ್ಲ, ಎಲ್ಲಾದರೂ ಒಂದು ದಮ್ಮ (ನಾಣ್ಯ)ಕ್ಕಾದರೂ ಸಿಗುವಷ್ಟು ಬಟ್ಟೆಯನ್ನು ತಂದುಕೊಡಿ' ಎಂದು ಬೇಡಿಕೊಳ್ಳುತ್ತಾನೆ. 'ಹಾಗೆಯೇ ಮಾಡೋಣ' ಎಂದು ಭರವಸೆ ನೀಡಿದ ಕಾಷ್ಠಕೂಟ ಸೌದೆಹೊರೆಯನ್ನು ಮನೆಗೆ ತಂದು ಹಾಕಿ, ಹೆಂಡತಿಯನ್ನು ಕಂಡು, 'ನೀನು ಇವನಿಗೆ ಹೊಟ್ಟೆತುಂಬ ಊಟ ಬಡಿಸಿದೆಯಾ?' ಎಂದು ಪ್ರಶ್ನಿಸುತ್ತಾನೆ. ಆಕೆ 'ಹಬ್ಬದ ದಿನವಾಗಿದ್ದರಿಂದ ಅವನಿಗೆ ತೃಪ್ತಿಯಾಗುವಷ್ಟು ಬಡಿಸಿದೆ' ಎಂದಾಗ, ಸಿಟ್ಟಾದ ಕಾಷ್ಠಕೂಟ ಆಕೆಗೆ ಸಾಯುವಂತೆ ಬಡಿದು, ತನ್ನ ಮನೆಯಿಂದ ಹೊರಹಾಕುತ್ತಾನೆ. ಈ ಘಟನೆಯು ನಂದಿಮಿತ್ರನಿಗೆ ತಿಳಿದು, ಆತ ಕಾಷ್ಠಕೂಟನ ಕೃತ್ಯಕ್ಕೆ ಹೇಸಿ, 'ಇಂತಹ ಪಂಚಮಹಾಪಾಪ ಮಾಡಿದವನ ಮನೆಯಲ್ಲಿ ಮಾರಿದೇವತೆ ನೆಲೆಸಲಿ' ಎಂದು ಶಪಿಸಿ, ಆತನ ಸಹಾಯವಿಲ್ಲದೆ ತಾನೇ ಪ್ರತ್ಯೇಕವಾಗಿ ಸೌದೆ ಕಡಿದು ಮಾರಲು ತೀರ್ಮಾನಿಸುತ್ತಾನೆ. ಅದರಂತೆ ಪ್ರತಿದಿನ ಕಾಡಿಗೆ ಹೋಗಿ ಸೌದೆ ಕಡಿದು, ಪಟ್ಟಣಕ್ಕೆ ಸಾಗಿಸಿ, ನಿತ್ಯ ಮಾರುತ್ತಿದ್ದಲ್ಲಿಗೆ ನೀಡಿದಾಗ, ಈ ಹಿಂದೆ ಇಷ್ಟೇ ಪ್ರಮಾಣದ ಸೌದೆಗೆ ಎಂಟು ದಮ್ಮಗಳನ್ನು ನೀಡುತ್ತಿದ್ದವರು ಈಗ ಅತಿ ಕನಿಷ್ಠ ಬೆಲೆಯ ನಾಣ್ಯವನ್ನು ನೀಡುತ್ತಿದ್ದುದರಿಂದ, ಬೇರೆ ದಾರಿಗಾಣದೆ, ಆ ಸೌದೆಯನ್ನು ಅರೆಹೊಟ್ಟೆಗಾಗುವಷ್ಟು ಅನ್ನ–ಅಂಬಲಿಗೂ ಎಣ್ಣೆ–ಹುಳಿಗಂಜಿಗೂ ಕೊಟ್ಟು ಹೋಗುತ್ತಿದ್ದನು.'' ಇದಿಷ್ಟು ಕಥೆಯ ಒಂದು ಭಾಗ.

ಇಲ್ಲಿ ಪಾಪಕೃತ್ಯ ಮಾಡಿದ ಜೀವವೊಂದು ಪೃಥ್ವಿಶ್ರೀಯ ಗರ್ಭವನ್ನು ಪ್ರವೇಶಿಸಿದ್ದರಿಂದ ದೇವಿಲನ ಸಂಪತ್ತು ಕ್ರಮೇಣ ಕಡಿಮೆಯಾಗುತ್ತಾ ಸಾಗುತ್ತದೆ. ಆ ಜೀವಕ್ಕೆ ಜನ್ಮನೀಡಿ ನಂದಿಮಿತ್ರನೆಂಬ ಹೆಸರನ್ನಿಟ್ಟು ಆರೈಕೆ ಮಾಡಿದ ತಾಯಿಯಾದಿಯಾಗಿ ಆತನಿಗೆ ಆಶ್ರಯ ನೀಡಿದವರೂ ಸತ್ತು, ಆತನ ಕುಲವೇ ಕ್ಷಯವಾಗುತ್ತದೆ. ಇಂತಹ ಪಾಪಾತ್ಮನಾದ ನಂದಿಮಿತ್ರನು ಕಾಡಿನಲ್ಲಿ ಸಾಗುತ್ತಿದ್ದ ಶಿವಗುಪ್ತಾಚಾರ್ಯರೆಂಬ ಜೈನಮುನಿಗಳನ್ನು ಆಕಸ್ಮಿಕವಾಗಿ ಹಿಂಬಾಲಿಸಿ, ಅವರ ವ್ರತದಿಂದ ಪ್ರಭಾವಿತನಾಗಿ, ಜೈನಧರ್ಮದಲ್ಲಿ ಶ್ರದ್ಧೆಯನ್ನು ಹೊಂದಿ, ಆ ಧರ್ಮದ ಆಚರಣೆಗಳನ್ನು ಮಾಡಿದ್ದರಿಂದ ಮರಣದ ತರುವಾಯ ಆತನಿಗೆ ಸ್ವರ್ಗದಲ್ಲಿ ಉತ್ತಮ ಸ್ಥಾನ ಲಭ್ಯವಾಗುತ್ತದೆ. ತನ್ನ ತಂದೆ–ತಾಯಿ, ಬಂಧುಗಳ ಸಮೇತ ತನ್ನನ್ನು ಸಾಕಿ ಸಲಹಿದ ಕುಲವನ್ನೇ ನಾಶಗೈಯುವಷ್ಟು ಪಾಪಾತ್ಮನಾದವನಿಗೂ ಜೈನಧರ್ಮದಲ್ಲಿ ಉದ್ಧಾರವಿದೆ ಎಂಬ ಸಂದೇಶವನ್ನು ಸೂಚ್ಯವಾಗಿ ನೀಡುವ ಮೂಲಕ ಜೈನಧರ್ಮದ ಶ್ರೇಷ್ಠತೆಯನ್ನು ಈ ಕಥೆಯಲ್ಲಿ ಸಾರಲಾಗಿದೆ. ಇಂತಹ ಕಥೆಗಳು ಸಮಾಜದ

ಮೇಲೆ ಸಾಕಷ್ಟು ಪರಿಣಾಮ ಬೀರಿವೆ. ಇಂದಿಗೂ ಮಗು ಹುಟ್ಟುವ ಸಂದರ್ಭದಲ್ಲಿ ಕುಟುಂಬದಲ್ಲಾಗುವ ಒಳಿತು-ಕೆಡುಕುಗಳಿಗೆ ಆ ಮಗುವನ್ನೇ ಹೊಣೆಗಾರರನ್ನಾಗಿಸಿ ಆರೋಪಿಸುವುದನ್ನು ಸಮಾಜದಲ್ಲಿ ಕಾಣಬಹುದು.

ನಂದಿಮಿತ್ರ ಪ್ರಾಯಕ್ಕೆ ಬರುವವರೆಗೂ ಹೊಟ್ಟೆಪಾಡಿಗೆ ಅವಲಂಬಿಸಿದ್ದು ಭಿಕ್ಷಾಟನೆಯನ್ನು. ಭಿಕ್ಷದ ಅನ್ನ ತಿಂದರೂ ಆತ ಕೃಶನಾಗಿರದೆ, ಎಂಟು ಜನರು ಅಲುಗಾಡಿಸಲಾಗದ ಕಲ್ಲನ್ನು ಎತ್ತಿತಂದ ಹಾಗೂ ಹತ್ತು ಜನರು ಹೊರುವಂತಹ ಸೌದೆಹೊರೆಯನ್ನು ಒಬ್ಬನೇ ಹೊರುತ್ತಿದ್ದ. ಇದು ಆತನ ದೈಹಿಕ ಬಲವನ್ನು ಸೂಚಿಸುತ್ತದೆ. ಪಟ್ಟಣ ಪ್ರವೇಶಿಸಿದ ನಂದಿಮಿತ್ರ ಯಾಂತ್ರಿಕವಾಗಿ ಕಾಷ್ಠಕೂಟನನ್ನು ಹಿಂಬಾಲಿಸುವುದು ಅಸಹಜ ಎನಿಸುತ್ತದೆ. ಹಾಗೆಯೇ ಆತ ಮಲಗಿದಾಗ ತಾನೂ ಮಲಗಬೇಕೇನೋ ಎಂದು ತಪ್ಪಾಗಿ ತಿಳಿದು ಮಲಗಲು ಉದ್ಯುಕ್ತನಾಗುವುದು ಆತನ ಬೌದ್ಧಿಕಮಟ್ಟವನ್ನೂ, ತನಗೆ ಈ ಪಟ್ಟಣದಲ್ಲಿ ಯಾರೂ ಪರಿಚಯವಿಲ್ಲ ಎಂದು ಕಾಷ್ಠಕೂಟನಿಗೆ ತಿಳಿಸಿ, ಅರೆಹೊಟ್ಟೆಯ ಊಟಕ್ಕಾಗಿ ದುಡಿಯುವುದನ್ನು ಗಮನಿಸಿದರೆ ಆತ ಬದುಕಲು ಬೇಕಾದ ಲೋಕಜ್ಞಾನವನ್ನು ಹೊಂದಿರಲಿಲ್ಲ ಎಂಬುದೂ ವೇದ್ಯವಾಗುತ್ತದೆ. ಬಾಲ್ಯದಿಂದಲೂ ಭಿಕ್ಷೆ ಬೇಡಿ ತಿನ್ನುತ್ತಿದ್ದ ನಂದಿಮಿತ್ರ ದುಡಿದು ತಿನ್ನುವ ಯಾವ ಕೆಲಸವನ್ನೂ ಕಲಿಯಲಿಲ್ಲ ಹಾಗೂ ಕಲಿಸುವವರ ಸಹವಾಸವೂ ಸಿಗಲಿಲ್ಲ. ಭಿಕ್ಷೆ ಬೇಡಿ ತಿನ್ನುವುದಕ್ಕಿಂತ ದುಡಿದು ತಿನ್ನುವುದು ಲೇಸು ಎಂದು ನಂದಿಮಿತ್ರನಿಗೆ ಅನ್ನಿಸಿರಬಹುದು. ಹಾಗಾಗಿಯೇ ಆತ ಕಾಡಿನಲ್ಲಿರುವ ಸೌದೆಯನ್ನು ಕಡಿದು ಹೊರೆಮಾಡಿ, ಪಟ್ಟಣದಲ್ಲಿ ಮಾರುವುದು ಕಾಷ್ಠಕೂಟನಿಂದ ಕಲಿತ ಮೊದಲ ಕೈಗಾರಿಕಾ ವಿದ್ಯೆ ಎನ್ನಬಹುದು.

ಇಲ್ಲಿ ಕಾಷ್ಠಕೂಟ ತಾನೂ ಒಬ್ಬ ಕಾರ್ಮಿಕನಾದರೂ ಆತನದು ವ್ಯಾಪಾರಿ ಧೋರಣೆಯ ಬುದ್ಧಿ. ನಂದಿಮಿತ್ರ ತನ್ನನ್ನು ಹಿಂಬಾಲಿಸಿ ಬಂದು, ಬೃಹತ್ ಕಲ್ಲನ್ನು ತನ್ನ ತಲೆದಿಂಬಾಗಿ ಇಟ್ಟುಕೊಂಡಿದ್ದನ್ನು ಗಮನಿಸಿ, ಅವನ ಬಲವನ್ನು ಅಂದಾಜಿಸಿ, ಅವನನ್ನು ಮನೆಗೆ ಕರೆದುಕೊಂಡು ಹೋಗುತ್ತಾನೆ. ಅನಂತರ ಆತ ನಂದಿಮಿತ್ರನನ್ನು ಕೇಳುವುದು 'ಈ ಪಟ್ಟಣದಲ್ಲಿ ನಿನಗೆ ಯಾರಾದರೂ ನೆಂಟರಿರುವರೆ?' ಎಂದು. 'ಯಾರೂ ನೆಂಟರಿಲ್ಲ' ಎಂಬ ತನ್ನ ನಿರೀಕ್ಷೆಯ ಉತ್ತರ ನಂದಿಮಿತ್ರನಿಂದ ಬಂದೊಡನೆ ಆತ ಪುನಃ ಪ್ರಶ್ನಿಸದೆ ತನ್ನ ವ್ಯವಹಾರ ಯೋಜನೆ (Business plan) ಯನ್ನು ಕಾರ್ಯಗತಗೊಳಿಸಲು ಮುಂದಾಗುತ್ತಾನೆ. ಇಲ್ಲಿ ನಂದಿಮಿತ್ರನ ಸಂದರ್ಶನ (Interview) ಕೇವಲ ಒಂದೇ ಒಂದು ಪ್ರಶ್ನೆಗೆ ನಿಲುಗಡೆಯಾಗುತ್ತದೆ. ಅನಂತರ ಕಾಷ್ಠಕೂಟ ಭೇಟಿಯಾಗುವುದು ತನ್ನ ಹೆಂಡತಿ ಜಯಘಂಟೆಯನ್ನು. ಹೊಸದಾಗಿ ಕೆಲಸಕ್ಕೆ ಸೇರಿದ ನಂದಿಮಿತ್ರನಿಗೆ ಎಂದಿಗೂ ಹೊಟ್ಟೆತುಂಬ ಊಟ ಹಾಕಬೇಡ; ತಲೆಗೆ ಹೆಚ್ಚು ಎಣ್ಣೆ ಉಯ್ಯಬೇಡ ಹಾಗೂ ಮೈಗೆ ಎಂದು ಕೇಳಿದರೂ ಎಣ್ಣೆ ಕೊಡಬೇಡ ಎಂದು ಆಕೆಗೆ ಆತ ಆಜ್ಞಾಪಿಸು (Order) ವುದು ಕಾಷ್ಠಕೂಟನ ಕ್ರೂರ ಮನಸ್ಥಿತಿಯನ್ನು ಪ್ರದರ್ಶಿಸುತ್ತದೆ. ಪತ್ನಿಯಾದ ಜಯಘಂಟೆ ಗಂಡನ ಆಜ್ಞಾನುಸಾರ ನಡೆಯುವಳೇ ಹೊರತು ಒಳಿತು-ಕೆಡುಕು, ನೈತಿಕ-ಅನೈತಿಕ ಸಂಗತಿಗಳ ವಿಚಾರ ವಿಮರ್ಶೆ ನಡೆಸಿ, ಯಾವುದೇ ನಿರ್ಧಾರ

ತೆಗೆದುಕೊಳ್ಳುವ ಸ್ವಾತಂತ್ರ್ಯ ಆಕೆಗಿಲ್ಲ. ಬದುಕಿಗೆ ಗಂಡನನ್ನು ಅವಲಂಬಿಸಿರುವ ಆಕೆಯ ಸ್ಥಿತಿ ಒಂದು ರೀತಿಯಲ್ಲಿ ಮರವನ್ನು ತಬ್ಬಿರುವ ಬಳ್ಳಿಯಂತೆ. ಇಂದಿನ ಕಂಪನಿಗಳಲ್ಲಿ ಯಜಮಾನ (Owner) ನ ಅನುಕೂಲಕ್ಕೆ ತಕ್ಕಂತೆ ಕೆಲಸ ಮಾಡುವ ವ್ಯವಸ್ಥಾಪಕ (Manager) ನ ರೀತಿ. ಕಂಪನಿಯ ಯಜಮಾನ ನಿಗದಿಪಡಿಸಿದ ಕೆಲಸ, ಸಂಬಳ, ಸೌಲಭ್ಯ ಮೊದಲಾದವುಗಳನ್ನು ಸರಿಯಾಗಿ ನಿರ್ವಹಿಸುವುದನ್ನು ಹೊರತುಪಡಿಸಿ, ಕೆಲಸಗಾರರ ಬಗೆಗಿನ ಅನುಕಂಪ ಅಥವಾ ಕನಿಕರದಿಂದ ಕಂಪನಿ ಅಥವಾ ಯಜಮಾನನಿಗೆ ನಷ್ಟವಾಗುವಂತಹ ಯಾವ ನಿರ್ಧಾರಗಳನ್ನೂ ಸ್ವಯಂ ತೆಗೆದುಕೊಳ್ಳುವ ಕಿಂಚಿತ್ತು ಸ್ವಾತಂತ್ರ್ಯವೂ ಆತನಿಗಿರುವುದಿಲ್ಲ. ಶ್ರಮಪಟ್ಟು ಕೆಲಸ ಮಾಡುವ ಶ್ರಮಿಕರಿಂದ ಕಂಪನಿ ಲಾಭ ಗಳಿಸುವಂತೆ, ನಂದಿಮಿತ್ರನಿಗೆ ಹತ್ತು ಜನ ಹೊರುವಂಥ ಸೌದೆಹೊರೆಯನ್ನು ಹೊರಿಸಿ ಪಟ್ಟಣದಲ್ಲಿ ಮಾರುತ್ತಿದ್ದುದರಿಂದ, ಕಾಷ್ಠಕೂಟ ಬಹಳ ಬೇಗ ಧನಿಕನಾಗುತ್ತಾನೆ.

ಇಲ್ಲಿ ಕಾಷ್ಠಕೂಟನು ನಂದಿಮಿತ್ರನಿಗೆ ಕೇಳುವ ಪ್ರಶ್ನೆ ಹಾಗೂ ತನ್ನ ಪತ್ನಿಗೆ ಅಧಿಕಾರವಾಣಿಯಿಂದ ಆಜ್ಞಾಪಿಸುವ ಒಂದೆರಡು ಮಾತುಗಳು ಎಷ್ಟೊಂದು ಆಲೋಚನೆಗಳ ಮೊತ್ತವಾಗಿದೆ. ಸಂಬಂಧಿಕರು ಇಲ್ಲದಿದ್ದರೆ ಈತನಿಂದ ತಾನು ಸಾಕಷ್ಟು ಕೆಲಸವನ್ನು ಮಾಡಿಸಬಹುದು; ಈತನ ಯೋಗಕ್ಷೇಮ ವಿಚಾರಿಸಲು ಯಾರೂ ಬರುವುದಿಲ್ಲ; ದಿಕ್ಕಿಲ್ಲದ ಪರದೇಸಿ! (ಅನಾಥ); ಹತ್ತುಜನರಿಂದ ಮಾಡಿಸುವ ಕೆಲಸವನ್ನು ಈತನೊಬ್ಬನಿಂದಲೇ ಮಾಡಿಸಿ, ಹೆಚ್ಚು ಲಾಭ ಗಳಿಸಬಹುದು! ಈತನನ್ನು ಸಾಕಲು ತಗುಲುವ ವೆಚ್ಚವೂ ಹೆಚ್ಚೇನಿಲ್ಲ. ಅರೆಹೊಟ್ಟೆಯ ಊಟ, ತಲೆಗೆ ಸ್ವಲ್ಪ ಎಣ್ಣೆ ಅಷ್ಟೇ. ಖರ್ಚು ಕಡಿಮೆ ಆದಾಯ ಹೆಚ್ಚು! ಕಾಷ್ಠಕೂಟನ ವ್ಯಾವಹಾರಿಕ ಚಾತುರ್ಯ ನಿಜಕ್ಕೂ ಮೆಚ್ಚುವಂತದ್ದೇ. ಇಂದಿನ ಬಂಡವಾಳಶಾಹಿ ಕಂಪನಿಗಳ ವ್ಯಾಪಾರಿ ಮನಸ್ಥಿತಿಯನ್ನು (Business mindset) ಕಾಷ್ಠಕೂಟ ಪ್ರತಿನಿಧಿಸಿದರೆ, ಆ ಮನಸ್ಥಿತಿಯೊಂದಿಗೆ ಹೂಡಿಕೆ ಮಾಡಿದ ವ್ಯವಹಾರವನ್ನು ವ್ಯವಸ್ಥಿತವಾಗಿ ನಿರ್ವಹಿಸುವ (Business Management) ಸ್ಥಾನವನ್ನು ಜಯಘಂಟೆ ಪ್ರತಿನಿಧಿಸುತ್ತಾಳೆ. ನಂದಿಮಿತ್ರ ಆ ಕಂಪನಿಗಳ ಉದ್ಧಾರಕ್ಕೆ ದುಡಿಯುವ ಕೆಲಸಗಾರರನ್ನು (Workers) ಪ್ರತಿನಿಧಿಸುತ್ತಾನೆ. ಒಂದು ಕಂಪನಿಗೆ ಹತ್ತು ಜನ ಕೆಲಸಗಾರರು ಬೇಕಾಗಿದ್ದು, ಯಾರೋ ಒಬ್ಬ ಕೆಲಸಗಾರ ಆ ಹತ್ತು ಜನರ ಕೆಲಸವನ್ನು ತಾನೊಬ್ಬನೇ ನಿಗದಿತ ಸಮಯದಲ್ಲಿ, ಕಂಪನಿ ನಿಗದಿಪಡಿಸಿದ ಸಂಬಳಕ್ಕೆ ದುಡಿಯುತ್ತೇನೆಂದು ಮುಂದೆ ಬಂದು ಅದನ್ನು ಸಾಬೀತುಪಡಿಸಿದರೆ, ಕಂಪನಿ ಆತನನ್ನು ಕೆಲಸಕ್ಕೆ ಸೇರಿಸಿಕೊಳ್ಳುತ್ತದೆಯೇ ಹೊರತು ಉಳಿದ ಒಂಭತ್ತು ಜನರನ್ನಲ್ಲ. ಏಕೆಂದರೆ ನೌಕರರು ಹೆಚ್ಚಾದಷ್ಟೂ ಅವರಿಗೆ ನೀಡುವ ಸಂಬಳ, ಸೌಲಭ್ಯಗಳ ವೆಚ್ಚ ಹೆಚ್ಚಾಗುತ್ತದೆ.

ನಂದಿಮಿತ್ರನ ಶ್ರಮದಿಂದ ಕಾಷ್ಠಕೂಟ ಬಹಳ ಬೇಗ ಸಿರಿವಂತನಾದರೂ ಆತನಿಗೆ ಅರೆಹೊಟ್ಟೆಯ ಊಟ ತಪ್ಪಲಿಲ್ಲ. ಆದರೆ ಒಂದು ದಿನ ಹಬ್ಬ (ಪರ್ವ) ವಿದ್ದುದರಿಂದ, ಜಯಘಂಟೆಯು ಕನಿಕರದಿಂದ ನಂದಿಮಿತ್ರನಿಗೆ ಹೊಟ್ಟೆತುಂಬ ತೃಪ್ತಿಯಾಗುವಷ್ಟು ಊಟ ಬಡಿಸುತ್ತಾಳೆ. ಎಷ್ಟಾದರೂ ಆಕೆಯದು ಹೆಂಗರುಳು.

ನಂದಿಮಿತ್ರ ಆಕೆಗೆ ಮಗನಂತೆ ಕಂಡಿರಬಹುದು ಅಥವಾ ತಮ್ಮನ್ನು ಸಿರಿವಂತರನ್ನಾಗಿ ಉದ್ಧಾರ ಮಾಡಿದ ಈತನಿಗೆ ಒಂದು ದಿನವಾದರೂ ಹೊಟ್ಟೆತುಂಬ ಊಟ ಬಡಿಸಿ, ಆ ಮೂಲಕ ಕೃತಜ್ಞತೆ ಸಲ್ಲಿಸೋಣ ಎಂದು ಭಾವನಾತ್ಮಕವಾಗಿ ಆಲೋಚಿಸಿರಬಹುದು. ಒಟ್ಟಿನಲ್ಲಿ ಹಬ್ಬದ ದಿವಸ ಕಾಷ್ಠಕೂಟನ ಆಜ್ಞೆಯನ್ನು ಮೀರಿ, ಆತನಿಗೆ ಗೊತ್ತಾಗದಂತೆ ನಂದಿಮಿತ್ರನಿಗೆ ಹೊಟ್ಟೆತುಂಬ ಬಡಿಸುತ್ತಾಳೆ. ಯಾವುದೇ ಕಂಪನಿ ತನ್ನ ಕೆಲಸಗಾರರನ್ನು ಲಾಭದಾಸೆಯಿಂದ ದುಡಿಸಿಕೊಂಡು ಬಹಳ ಬೇಗ ಲಾಭದಾಯಕ ಸ್ಥಿತಿಯನ್ನು ಗಳಿಸಿದಾಗಲೂ ನೌಕರರನ್ನು ಮೊದಲಿನಂತೆ ಕಡೆಗಣಿಸಿದ ಪರಿಸ್ಥಿತಿಯಲ್ಲಿ ನಂದಿಮಿತ್ರನಿದ್ದ. ತನ್ನಿಂದ ಕಾಷ್ಠಕೂಟ ಧನಿಕನಾಗಿದ್ದನ್ನು ನಂದಿಮಿತ್ರ ಅಂದಾಜಿಸಲೇ ಇಲ್ಲ. ತನ್ನ ದುಡಿಮೆಯ ಫಲವೇನು? ಎಂಬುದು ಎಲ್ಲಾ ಕಾರ್ಮಿಕರ ಪ್ರಾಥಮಿಕ ಆಲೋಚನೆ. ಆದರೆ ನಂದಿಮಿತ್ರ ಆ ಬಗೆಯಲ್ಲಿ ಯೋಚಿಸುವುದೇ ಇಲ್ಲ. ಈ ಆಲೋಚನಾ ಸಾಮರ್ಥ್ಯದ ಕೊರತೆಯನ್ನು ನಾವು ನಂದಿಮಿತ್ರನಲ್ಲಿ ಕಾಣಬಹುದು.

ಮಾರನೆಯ ದಿನ ಕಾಷ್ಠಕೂಟ ಮತ್ತು ನಂದಿಮಿತ್ರರಿಬ್ಬರೂ ಸೌದೆ ಕಡಿದು ತರಲು ಕಾಡಿನಲ್ಲಿ ಸಾಗುತ್ತಿರುವಾಗ, ನಂದಿಮಿತ್ರ ಅತ್ಯಂತ ವಿನಮ್ರವಾಗಿ ತನಗೆ ಒಂದು ನಾಣ್ಯಕ್ಕೆ ಸಿಗುವಷ್ಟಾದರೂ ಬಟ್ಟೆಯನ್ನು ತಂದುಕೊಡಿ ಎಂದಾಗ ಕಾಷ್ಠಕೂಟನಿಗೆ ಆ ಮನವಿ ಆಶ್ಚರ್ಯವನ್ನುಂಟು ಮಾಡಿದರೂ ಆ ಕ್ಷಣಕ್ಕೆ ಆಗಲಿ ಎಂದು ಒಪ್ಪಿಕೊಳ್ಳುತ್ತಾನೆ. ಆದರೆ ಆತ ಬಟ್ಟೆ ಕೊಡಿಸುವ ಆಲೋಚನೆ ಮಾಡದೆ, ನಂದಿಮಿತ್ರನನ್ನು ಸೌದೆ ಕಡಿಯಲು ಹೇಳಿ ಮನೆಗೆ ಬರುತ್ತಾನೆ. ಮನೆಯಲ್ಲಿದ್ದ ಜಯಘಂಟೆಯನ್ನು ಆತ ಕೇಳುವುದು ಒಂದೇ ಪ್ರಶ್ನೆ! 'ನಂದಿಮಿತ್ರನಿಗೆ ನೀನು ಹೊಟ್ಟೆತುಂಬ ಊಟ ಹಾಕಿದೆಯಾ?' ಎಂದು. ಯಾವಾಗ ಕರುಣೆಯೆಂಬ ಭಾವನೆಗೆ ಸೋತು ಹೊಟ್ಟೆತುಂಬ ಊಟ ಬಡಿಸಿದ್ದಾಳೆಂದು ತಿಳಿಯಿತೋ, ಆತ ಜಯಘಂಟೆಗೆ ಹೊಡೆದು, ಮನೆಯಿಂದ ಆಚೆಗಟ್ಟುತ್ತಾನೆ. ಏಕೆಂದರೆ ಅಂದೇ ಕಾಷ್ಠಕೂಟ ರಚಿಸಿದ್ದ ವ್ಯಾವಹಾರಿಕ ವ್ಯೂಹ ಛಿದ್ರವಾಯಿತು. ಬಡವನನ್ನು ಬಡವನನ್ನಾಗಿಯೇ ಉಳಿಸುವ ಆತನ ಕಾರ್ಯತಂತ್ರಕ್ಕೆ ತನ್ನ ಪತ್ನಿಯೇ ಮುಳ್ಳಾದಳು. ಬಡವರು ತನ್ನ ಅಧೀನದಲ್ಲಿರಬೇಕೆಂದು ಬಯಸುವ ಬಹುತೇಕ ಉಳ್ಳವರನ್ನು ಸಮಾಜದಲ್ಲಿ ಕಾಣಬಹುದು. ಇಲ್ಲಿ ಜಯಘಂಟೆ ವ್ಯವಸ್ಥಾಪಕ (management) ಕೆಲಸವನ್ನು ನಿರ್ವಹಿಸುವುದರಲ್ಲಿ ಎಡವಿದಳು. ತನಗೆ ಇದ್ದ ಆಜ್ಞೆಯನ್ನು ಮೀರಿ ವ್ಯಾವಹಾರಿಕ ತಂತ್ರಕ್ಕೆ ಕುಂದು ತಂದಿದ್ದರಿಂದ ಆಕೆ ದಂಡನೆಗೆ ಒಳಗಾಗಿ ಮನೆಯಿಂದ ಆಚೆ ಹೋಗಬೇಕಾಯಿತು. ಇದು ಅಂದಿನ ಕಾಲದಲ್ಲಿ ಬಹುಪಾಲು ಸ್ತ್ರೀಯರ ಪರಾಧೀನತೆ ಹಾಗೂ ಲಿಂಗ ಅಸಮಾನತೆಯನ್ನು ತೋರಿಸುತ್ತದೆ.

ಹಾಗೆಯೇ ಇಲ್ಲಿ ನಾವು ಮನುಷ್ಯನ ಮೂಲಭೂತ ಆವಶ್ಯಕತೆಗಳನ್ನು ಗುರುತಿಸಬಹುದು. ನಂದಿಮಿತ್ರ ಕಾಷ್ಠಕೂಟನ ಬಳಿ ಸಾಕಷ್ಟು ತಿಂಗಳು ದುಡಿದರೂ ಆತ ಎಂದಿಗೂ ಹೊಟ್ಟೆತುಂಬ ಊಟ ಕೇಳಿರಲಿಲ್ಲ. ಆದರೆ ಯಾವಾಗ ಜಯಘಂಟೆ ಕನಿಕರದಿಂದ ಒಂದು ದಿನ ಹೊಟ್ಟೆತುಂಬ ಊಟ ಬಡಿಸಿದಳೋ ಅಂದು ಆತನ ಅರೆಹೊಟ್ಟೆ ತುಂಬಿ, ಹೊಟ್ಟೆತುಂಬಿಸಿಕೊಳ್ಳುವ ಆಲೋಚನೆ ಪೂರ್ಣವಾಯಿತು. ಮುಂದಿನದು ಬಟ್ಟೆ. ಆಹಾರ, ಬಟ್ಟೆ ಮತ್ತು ವಸತಿ ಮಾನವನ ಮೂಲಭೂತ

ಅಗತ್ಯಗಳು. ಈ ಮೂರು ಪೂರ್ಣವಾದ ಬಳಿಕ ಆತ ಅಥವಾ ಆಕೆ ಮುಂದಿನದರ ಬಗ್ಗೆ ಆಲೋಚಿಸುತ್ತಾರೆ. ಇಷ್ಟು ದಿನ ನಂದಿಮಿತ್ರ ತನ್ನ ಅರೆ ಹೊಟ್ಟೆಯನ್ನು ತುಂಬಿಸಿಕೊಳ್ಳುವ ಕಡೆಗೆ ಮಾತ್ರ ಗಮನ ಕೊಡುತ್ತಿದ್ದ. ಹೊಟ್ಟೆ ತುಂಬಿದ ಬಳಿಕ ಆತನ ಗಮನ ಮಾನದ ಕಡೆ ಹೋಯಿತು. ಹಾಗಾಗಿಯೇ ಆತ ಮಾರನೆಯ ದಿನ ಕಾಷ್ಠಕೂಟನ ಬಳಿ ವಿನಮ್ರವಾಗಿ ಬಟ್ಟೆಗಾಗಿ ಮನವಿ ಸಲ್ಲಿಸಿದ. ಆದರೆ ಕಾಷ್ಠಕೂಟ ಆತನ ಬೇಡಿಕೆಯನ್ನು ಆ ಕ್ಷಣಕ್ಕೆ ತಿರಸ್ಕರಿಸದೆ, ಆತನ ಬೇಡಿಕೆಯ ಮೂಲವನ್ನು ಶೋಧಿಸುತ್ತಾನೆ. ಇಲ್ಲಿ ಕಾಷ್ಠಕೂಟನ ಆಲೋಚನೆ ಹಾಗೂ ಯೋಜನೆಯಲ್ಲಿ ಸ್ಪಷ್ಟತೆಯಿದೆ. ಆತ ಸಮಸ್ಯೆಯ ಮೂಲವನ್ನು ಚೆನ್ನಾಗಿ ಊಹಿಸಬಲ್ಲ. ಏಕೆಂದರೆ ಆತ ಹೆಣೆದಿರುವ ಜಾಲದ ಕೊಂಡಿ ಎಲ್ಲಿ ಕಳಚಬಹುದು ಎಂದು ಆತನಿಗಾಗಲೇ ಗೊತ್ತು. ಹಾಗಾಗಿಯೇ ಆತ ಜಯಘಂಟೆಗೆ ಅಧಿಕಾರವಾಣಿಯಿಂದ ಆಜ್ಞಾಪಿಸಿದ್ದು. ತನ್ನಾಜ್ಞೆ ಧಿಕ್ಕರಿಸಿದ ಪತ್ನಿಗೆ ಆತ ತಕ್ಕ ಶಿಕ್ಷೆ ನೀಡಿದ. ಆದರೆ ನಂದಿಮಿತ್ರನಿಗೆ ಬಟ್ಟೆ ಕೊಡಿಸಲಿಲ್ಲ. ಏಕೆಂದರೆ ದೇಹ-ಮಾನದ ಮೇಲೆ ಆಸೆಪಟ್ಟು ಬಟ್ಟೆ ಕೇಳಿದವನು, ನಾಳೆ ವಸತಿಯನ್ನೂ ಕೇಳುವನೆಂದು ಗೊತ್ತು. ಹಾಗಾಗಿ ಆತ ನಂದಿಮಿತ್ರನನ್ನು ನಿರ್ದಾಕ್ಷಿಣ್ಯವಾಗಿ ದೂರ ಇಡುತ್ತಾನೆ. ನಂದಿಮಿತ್ರನೂ ತನ್ನ ಕೋಪವನ್ನು ಕಾಷ್ಠಕೂಟನ ಮೇಲೆ ತೀರಿಸಲು ಶಕ್ತನಿಲ್ಲ. ಏಕೆಂದರೆ ಈಗಾಗಲೇ ಆತ ಸಿರಿವಂತನಾಗಿದ್ದಾನೆ. ಸಮಾಜ ಯಾವಾಗಲೂ ಬಹುಪಾಲು ಸಿರಿವಂತರ ಪರವಿರುವುದು ಸಹಜ ಎಂಬುದು ನಂದಿಮಿತ್ರನಿಗೆ ತಿಳಿದಿದೆ. ತನ್ನಿಂದ ಕಾಷ್ಠಕೂಟ ಸಿರಿವಂತನಾದರೂ ಆತನನ್ನು ಎದುರಿಸಲಾಗದ ಅಸಹಾಯಕ ಪರಿಸ್ಥಿತಿ ನಂದಿಮಿತ್ರನದು. 'ಬಡವನ ಸಿಟ್ಟು ದವಡೆಗೆ ಮೂಲ' ಎಂಬ ಗಾದೆ ಮಾತಿನಂತೆ ತನ್ನೆಲ್ಲಾ ಅಸಹಾಯಕತೆ, ಆಕ್ರೋಶಗಳನ್ನೆಲ್ಲಾ ಶಾಪದ ಮೂಲಕ ಹೊರಗೆಡಹುತ್ತಾನೆ. ಉಳ್ಳವರಿಂದ ದೌರ್ಜನ್ಯ, ಶೋಷಣೆಗೆ ಒಳಗಾಗುವವರ ಸಾರ್ವಕಾಲಿಕ ಮನಸ್ಥಿತಿಯನ್ನು ನಂದಿಮಿತ್ರ ಪ್ರತಿನಿಧಿಸಿದ್ದಾನೆ.

ಇನ್ನು ಮಾರುಕಟ್ಟೆಯ ಸಂಗತಿ ಸಾರ್ವಕಾಲಿಕ ಸತ್ಯವನ್ನು ದರ್ಶಿಸುತ್ತದೆ. ಕಾಷ್ಠಕೂಟನೊಂದಿಗೆ ಹತ್ತು ಜನರು ಹೊರುವ ಸೌದೆಯನ್ನು ಪಟ್ಟಣಕ್ಕೆ ತೆಗೆದುಕೊಂಡು ಹೋದಾಗ ಎಂಟು ದಮ್ಮ (ನಾಣ್ಯ) ಕೊಡುತ್ತಿದ್ದವರು, ಈಗ ಒಬ್ಬನೇ ಮಾರಲು ಹೋದಾಗ ಅಷ್ಟೇ ಪ್ರಮಾಣದ ಸೌದೆಗೆ ಕೇವಲ ಒಂದು ಚಿಕ್ಕನಾಣ್ಯ ಕೊಟ್ಟರು. ಏಕೆ ಹೀಗಾಯಿತು? ನಂದಿಮಿತ್ರನಿಗೆ ಮಾರುವ ಕೌಶಲ್ಯವಿಲ್ಲವೆ? ಎಂಬ ಸಂದೇಹ ಮೂಡುತ್ತದೆ. ಆದರೆ ಆತನೇನು ಹೊಸದಾಗಿ ಮಾರುತ್ತಿಲ್ಲವಲ್ಲ! ದಿನಂಪ್ರತಿ ಮಾರುವ ಸ್ಥಳ. ಅದೇ ಕೊಂಡುಕೊಳ್ಳುವ ಮಾರುಕಟ್ಟೆ! ಆದರೂ ಕನಿಷ್ಠ ಒಂದು ದಮ್ಮವೂ ಇಲ್ಲದೆ, ಆತನ ಅರೆಹೊಟ್ಟೆಗೆ ಸಾಕಾಗುವಷ್ಟು ಮಾತ್ರ ಕೊಡುತ್ತಿದ್ದರು. ಇದನ್ನು ಮಾರುಕಟ್ಟೆಯ ಏಕಸ್ವಾಮ್ಯ ಅಥವಾ ಹಿಡಿತ ಎನ್ನಬಹುದು! ಮಾರುಕಟ್ಟೆ ಕೆಲವೇ ವ್ಯಕ್ತಿಗಳ ಹಿಡಿತದಲ್ಲಿದ್ದರೆ ಹೊಸಬರು ಮಾರುಕಟ್ಟೆಗೆ ಪ್ರವೇಶಿಸುವುದೇ ಕಷ್ಟ. ಒಂದುವೇಳೆ ಪ್ರವೇಶಿಸಿದರೂ ಈಗಾಗಲೇ ಮಾರುಕಟ್ಟೆಯಲ್ಲಿ ಸ್ಥಾಪಿತವಾಗಿರುವವರ ಮುಂದೆ ತಮ್ಮ ಹೊಸ ಸರಕುಗಳನ್ನು ತಂದು ಪೈಪೋಟಿಯ ಬೆಲೆಯಲ್ಲಿ ಮಾರುವುದಾದರೂ ಹೇಗೆ ಸಾಧ್ಯ? ಹೀಗೆ ಬಂಡವಾಳಶಾಹಿ ಹಾಗೂ ದಲ್ಲಾಳಿಗಳ

ಹಿಡಿತದಿಂದ ಪಾರಾಗಿ ಹೊಸದಾಗಿ ತಮ್ಮ ಸರಕುಗಳೊಂದಿಗೆ ಪ್ರವೇಶಿಸುವ ಬಹುತೇಕ ಉದ್ಯಮಿಗಳು ಆರಂಭದಲ್ಲೇ ಸಾಕಷ್ಟು ನಷ್ಟ ಅನುಭವಿಸುವುದನ್ನು ಇಂದಿಗೂ ಕಾಣಬಹುದು. ಹಾಗಾಗಿ ಹೊಸದಾಗಿ ಮಾರುಕಟ್ಟೆ ಪ್ರವೇಶಿಸುವವರು ಮಾರುಕಟ್ಟೆಯ ಬಗ್ಗೆ ಸಂಪೂರ್ಣ ಅಧ್ಯಯನ ಮಾಡಿರಬೇಕು. ಸ್ಥಾಪಿತ ಹೂಡಿಕೆದಾರರ ನಡುವೆ ತನ್ನ ವ್ಯವಹಾರವನ್ನು ನಿರ್ವಹಿಸುವ ಹಾಗೂ ತನ್ನ ಸರಕಿಗೆ ಬೇಡಿಕೆ ಸೃಷ್ಟಿಸುವ ಕೌಶಲ್ಯಗಳನ್ನು ಗಳಿಸಿಕೊಳ್ಳಬೇಕು. ಇಲ್ಲವಾದರೆ ನಂದಿಮಿತ್ರನಿಗಾದ ಗತಿಯೇ ಆಗುವುದು. ದೇಶದ ಆರ್ಥಿಕ ಶಕ್ತಿಯಾದ ಮಾರುಕಟ್ಟೆಯನ್ನು ಕಬಂಧ ಬಾಹುಗಳು, ವಿಷಜಾಲಗಳು ಹೇಗೆ ಆಕ್ರಮಿಸಿಕೊಂಡಿರುತ್ತವೆ ಎಂಬುದನ್ನು ಹತ್ತನೇ ಶತಮಾನದಲ್ಲಿದ್ದ ಶಿವಕೋಟ್ಯಾಚಾರ್ಯ ಈ ಕಥೆಯ ಮೂಲಕ ಸೂಚ್ಯವಾಗಿ ತಿಳಿಸಿದ್ದಾನೆ.

ಒಟ್ಟಾರೆಯಾಗಿ 'ನಂದಿಮಿತ್ರ–ಕಾಷ್ಠಕೂಟ–ಜಯಘಂಟೆ–ಮಾರುಕಟ್ಟೆ' ಎಂಬ ಸಂಗತಿಗಳು ಅವರವರ ಬದುಕಿನಲ್ಲಿ ಭಿನ್ನ ಪರಿಣಾಮಗಳನ್ನು ಉಂಟುಮಾಡಿವೆ. ಜಾಗತಿಕ ಮಾರುಕಟ್ಟೆಯು ಇಂದು ಪ್ರತಿಯೊಬ್ಬನ ಬದುಕಿನಲ್ಲೂ ತಿಳಿದೋ ತಿಳಿಯದೆಯೋ ಪ್ರವೇಶ ಪಡೆದಿದೆ. ಹಳೆಯ ವ್ಯಾಪಾರಿ ಸ್ವಲ್ಪ ಕಾಲದವರೆಗೆ ನಷ್ಟವಾದರೂ ತಡೆದುಕೊಳ್ಳುವನು; ಆದರೆ ಹೊಸದಾಗಿ ಮಾರುಕಟ್ಟೆ ಪ್ರವೇಶಿಸಿರುವವನು ಆರಂಭದಲ್ಲೇ ನಷ್ಟವಾದರೆ ಸಾಲದ ಸುಳಿಗೆ ಸಿಲುಕಿ ನಾಶವಾಗುವನು. ಬೃಹತ್ ಬಂಡವಾಳ ಹೂಡಿ ಸಣ್ಣ–ಪುಟ್ಟ ಕಂಪನಿಗಳನ್ನು ದಿವಾಳಿ ಎಬ್ಬಿಸಿ, ಮಾರುಕಟ್ಟೆಯನ್ನು ತಮ್ಮ ಏಕಸ್ವಾಮ್ಯಕ್ಕೆ ತೆಗೆದುಕೊಳ್ಳುವ ಸಂಗತಿಗಳು ಇಂದು ಸಾಮಾನ್ಯ ಎನಿಸುವಷ್ಟರ ಮಟ್ಟಿಗೆ ಮಾಮೂಲಾಗಿವೆ. 'ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಎಂಬ ಕನಕದಾಸರ ಕೀರ್ತನೆಯಲ್ಲಿ ಬರುವ ಮನುಷ್ಯನ ನಾನಾ ವೇಷಗಳಲ್ಲಿ ಶಿವಕೋಟ್ಯಾಚಾರ್ಯನ ನಂದಿಮಿತ್ರ ವೇಷದ ಮೂಲಕ, ಮನುಷ್ಯನ ಮೂಲಭೂತ ಆವಶ್ಯಕತೆಗಳೊಂದಿಗೆ ಅಂದಿನ ಮಾರುಕಟ್ಟೆಯ ಒಂದು ಸಂಗತಿಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಇಂದಿನ ಮಾರುಕಟ್ಟೆಗೆ ಅನ್ವಯಿಸುವ ಮೂಲಕ ಓದುಗರಲ್ಲಿ ಹೊಸ ಅರಿವನ್ನು ಮೂಡಿಸಲು ಪ್ರಯತ್ನಿಸಲಾಗಿದೆ. ಹಳೆಗನ್ನಡದಂತಹ ಪ್ರಾಚೀನ ಸಾಹಿತ್ಯದಲ್ಲಿ ಸೂಚ್ಯವಾಗಿ ಮೂಡಿಬಂದಿರುವ ಅಂಶಗಳನ್ನು ಆನ್ವಯಿಕ ದೃಷ್ಟಿಯಿಂದ ನೋಡುವ, ವಿಶ್ಲೇಷಿಸುವ, ನವೀನವಾಗಿ ನಿರೂಪಿಸುವ ಅಗತ್ಯ ಎಲ್ಲ ಕಾಲಕ್ಕೂ ಇರುತ್ತದೆ ಎಂದು ಹೇಳಬಹುದು.

## ಆಕರ ಗ್ರಂಥಗಳು:

1. ನರಸಿಂಹಾಚಾರ್ ಡಿ.ಎಲ್. (ಸಂ.), (2017), ವಡ್ಡಾರಾಧನೆ, ಮೈಸೂರು: ಡಿ.ವಿ.ಕೆ. ಮೂರ್ತಿ ಪ್ರಕಾಶನ.
2. ಕೇಶವಭಟ್ಟ ಟಿ. (ಅನು.), (2020), ವಡ್ಡಾರಾಧನೆ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.

## ಪರಾಮರ್ಶನ ಗ್ರಂಥಗಳು:

1. ಚಿಕ್ಕಮಾದು ಎನ್.ಎನ್., (2015), ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳು, ಮೈಸೂರು: ರಚನ ಪ್ರಕಾಶನ.
2. ನಾಯಕ ಹಾ.ಮಾ. (ಪ್ರ.ಸಂ.), (2016), ಕನ್ನಡ ರತ್ನಕೋಶ (ಪರಿಷ್ಕೃತ), ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
3. ನಾರಾಯಣ ಪಿ.ವಿ., (2017), ಹಳಗನ್ನಡ ಪದಸಂಪದ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.

## ಪಾರಿಭಾಷಿಕ ಪದಗಳು:

1. **ಪಂಚಮಹಾಪಾತಕ:** ಬಾಲ, ಸ್ತ್ರೀ, ಗೋವು, ಬ್ರಾಹ್ಮಣ, ಋಷಿ–ಇವರನ್ನು ಕೊಲ್ಲುವುದು.
2. **ದಮ್ಮ:** ನಾಣ್ಯ.
3. **ಮೂಲಭೂತ:** ಪ್ರಧಾನವಾದ, ಮೊತ್ತಮೊದಲಿನ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.